Date :03-06-2016

quickmarketreports.com

# ಬೇಳೆಕಾಳುಗಳು 2016–17 ಖಾರಿಫ್ ಸೀಸನ್‌ನ ಬೆಂಬಲ ಬೆಲೆ ಹೆಚ್ಚಳ

ದೇಶೀ ಉತ್ಪಾದನೆ ಹೆಚ್ಚಿಸಲು ಹಾಗೂ ಆಮದಿನ ಮೇಲಿನ ಅವಲಂಬನೆ ಕಡಿತಗೊಳಿಸಲು ಕೇಂದ್ರ ಸರಕಾರ ಬೇಳೆಕಾಳುಗಳ ಕನಿಷ್ಠ ಬೆಂಬಲ ಬೆಲೆ ಹಾಗೂ ವಿಶೇಷ ಬೋನಸ್ ಸೇರಿಸಿ ಹೆಚ್ಚಳಗೊಳಿಸಿದೆ. ಇದರನ್ವಯ ತೊಗರಿಯ 2016–17ನೇ ಸೀಸನ್‌ನ ಖಾರಿಫ್ ಬೆಳೆಯ ಬೆಂಬಲ ಬೆಲೆ ಪ್ರತಿ ಕ್ವಿಂಗೆ ರೂ. 425 ಹೆಚ್ಚಳ ಗೊಳಿಸಿ ರೂ.5050ಕ್ಕೆ ನಿಗದಿಗೊಳಿಸಿದೆ. ಇದರಲ್ಲಿ ರೂ.200 ಬೋನಸ್ ಒಳಗೊಂಡಿದೆ. ಉದ್ದು ಕನಿಷ್ಠ ಬೆಂಬಲ ಬೆಲೆ ರೂ.375 ಹೆಚ್ಚಳಗೊಳಿಸಿ ರೂ.5000 ಹಾಗೂ ಹೆಸರು ಕಾಳು ರೂ.375 ಹೆಚ್ಚಳಗೊಳಿಸಿ ಪ್ರತಿ ಕ್ವಿಂ.ಗೆ ರೂ. 5225ಕ್ಕೆ ನಿಗದಿಗೊಳಿಸಿದೆ. ಕೇಂದ್ರ ಸರಕಾರದ ಆರ್ಥಿಕ ಸಚಿವಾಲಯದ ಆರ್ಥಿಕ ಸಮಿತಿಯ ಸಲಹೆಯನ್ನಯ ಬೆಂಬಲ ಬೆಲೆ ಹೆಚ್ಚಳಗೊಳಿಸಲಾಗಿದೆಯೆನ್ನಲಾಗಿದೆ.